**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**

**ವಿಶೇಷ ಮೊಕದ್ದಮೆ ಸಂಖ್ಯೆ 367/2020**

ಚಾ.ಸಾಃ 01 ಪ್ರಾ.ಸಾಃ 01

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 11.11.2024

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಮುಂದುವರೆದ ಪಾಟೀ ಸವಾಲುಃ-**

3. ನಿರ್ಮಲಾ ಈಕೆಯೂ ಜೆ.ಡಿ.ಎಸ್.ನಿಂದ ಕೌನ್ಸಲರ್ ಆಗಿದ್ದರು ಎನ್ನುವುದು ನಿಜ. ಪಾಟೀಲ್ ಓಣಿಗೆ ಸಂಬಂದಪಟ್ಟಂತೆ ನಿರ್ಮಲಾ ಕೌನ್ಸಲರ್ ಆಗಿದ್ದರು. ನಾನು ಕಟ್ಟಿಸಿರುವ ಮನೆ ಚನ್ನವೀರಪ್ಪ ಮಾಸ್ಟರ್ ಲೇಔಟ್ ನಲ್ಲಿ ಇದೆ ಎನ್ನುವುದು ನಿಜ. ಚನ್ನವೀರಪ್ಪ ಮಾಸ್ಟರ್ ಇವರು ನೇಕಾರರ ಸಲುವಾಗಿ ಲೇಔಟ್ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಗಂಡ ಯಲ್ಲಪ್ಪ ಮುನ್ಸಿಪಾಲಿಟಿಯಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು ನಿಜ. ನನ್ನ ಗಂಡ ಯಲ್ಲಪ್ಪನಿಗೆ ನಾನು ಎರಡನೇ ಹೆಂಡತಿ ಎನ್ನುವುದು ನಿಜ. ನಮ್ಮ ಓಣಿಯಲ್ಲಿ ನಮ್ಮ ರಸ್ತೆಯ ಮುಂದೆ ಗೀತಾ, ಶೀಲ್ಪಾ, ಪದ್ಮ, ರಾಚಮ್ಮ ಇವರ ಮನೆಯ ಮುಂದೆ ಗುಡ್ಡಕ್ಕೆ ಹೋಗುವ ದಾರಿ ಇದೆ ಎನ್ನುವುದು ನಿಜ. ಇವರೆಲ್ಲರೂ ಮತ್ತು ನಾನು ಸಹ ಬಹಿರ್ದೆಶೆಗೆ ಹೋಗುವುದಕ್ಕಾಗಿ ಗುಡ್ಡದ ಕಡೆಗೆ ಹೋಗುತ್ತೇವೆ ಎನ್ನುವುದು ನಿಜ. ಆ ಸಮಯದಲ್ಲಿ ಅರಣ್ಯ ಇಲಾಖೆಯವರು ನಿರ್ಮಲಾ ಇವರ ಅವಧಿಯಲ್ಲಿ ಅಲ್ಲಿ ಒಂದು ಕಾಂಪೌಂಡ್ ಕಟ್ಟಿದ್ದರು ಎನ್ನುವುದು ಸರಿಯಲ್ಲ. ಅದಕ್ಕಾಗಿ ನಿರ್ಮಲಾ ಈಕೆಯ ಮೇಲೆ ನಾವು ದ್ವೇಷ ಮಾಡಿದೆವು ಎನ್ನುವುದು ಸುಳ್ಳು. ನಮ್ಮ ಮನೆಯ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ ಎನ್ನುವುದು ನಿಜ.

4. ನಾನು ಮನೆ ಕಟ್ಟುವಾಗ ಚರಂಡಿ ಒತ್ತುವರಿ ಮಾಡಿ ನಾನು ಮನೆ ಕಟ್ಟುತ್ತಿದ್ದೆನು ಎನ್ನುವುದು ಸುಳ್ಳು. ಆ ಸಮಯದಲ್ಲಿ ಗೀತಾ, ಶೀಲ್ಪಾ, ಪದ್ಮಾವತಿ, ರಾಚಮ್ಮ, ಮಹಾಂತಮ್ಮ, ಮಹಿಬೂಬಿ ಮತ್ತು ಶಂಕರಲಿಂಗ ಇವರೆಲ್ಲರೂ ಸೇರಿ ನನ್ನ ವಿರುದ್ಧ ಮುನ್ಸಿಪಾಲಿಟಿಗೆ ತಕರಾರು ಕೊಟ್ಟಿದ್ದರು ಎನ್ನುವುದು ಸುಳ್ಳು. ಶಿವಮ್ಮ ಅವರ ಮತ್ತು ಶಂಕರಲಿಂಗ ಅವರ ಮಿಲ್ಕ್ ವ್ಯಾನ್ ಅವರ ಮನೆಗೆ ಹೋಗುತ್ತಿತ್ತು ಎನ್ನುವುದು ನಿಜ. ಆಕ್ಷೇಪಣೆ ಇದ್ದ ಕಾರಣದಿಂದ ನಾನು ನನ್ನ ಕಟ್ಟಡ ಕಟ್ಟುವ ಕೆಲಸ ನಿಲ್ಲಿಸಿದ್ದೆನು ಎನ್ನುವುದು ಸುಳ್ಳು.

5. ಚಂದಪ್ಪ ಹಕರಕಿ ನನ್ನ ಗಂಡನಿಗೆ ಅಣ್ಣನಾಗಬೇಕು. ಆಗ ಚಂದಪ್ಪ ಹಕರಕಿ ಸಿ.ಎಮ್.ಸಿ ಸದಸ್ಯನಾಗಿದ್ದನು ಎನ್ನುವುದು ಸರಿಯಲ್ಲ. ಚಂದಪ್ಪ ಈತನು ಯಾವಾಗಲೂ ಸದಸ್ಯನಾಗಿರಲಿಲ್ಲ. ಚಂದಪ್ಪ ಈತನು ನನ್ನ ಮನೆಯ ಕಟ್ಟುವ ಸಮಯದಲ್ಲಿ ಅಧ್ಯಕ್ಷ ಇದ್ದನು ಎನ್ನುವುದು ಸರಿಯಲ್ಲ. ಚಂದಪ್ಪ ಈತನ ಪ್ರಭಾವದಿಂದ ನನ್ನ ಕಟ್ಟಡ ಕಟ್ಟುವ ಕೆಲಸ ಮುಂದುವರೆಸಿದ್ದೆನು ಎನ್ನುವುದು ಸರಿಯಲ್ಲ. ಈ ವಿಷಯವಾಗಿ ನಿರ್ಮಲಾ ಈಕೆಗೆ ದ್ವೇಷ ಇತ್ತು ಎನ್ನುವುದು ಸುಳ್ಳು.

6. ಈ ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ಕೋವಿಡ ಇತ್ತು ಎನ್ನುವುದು ನಿಜ. ಆ ಸಮಯದಲ್ಲಿ ಸರಕಾರದ ಯಾವುದೇ ಕೆಲಸ-ಕಾರ್ಯಗಳನ್ನು ನಡೆಸುತ್ತಿರಲಿಲ್ಲ ಎನ್ನುವುದು ನಿಜ. ಘಟನೆ ನಡೆದ ಸಮಯದಲ್ಲಿ ಕಟ್ಟಡ ಕಟ್ಟುವ ಕೆಲಸವನ್ನು ಸ್ಲಮ್ ಬೊರ್ಡಿನವರು ಕಟ್ಟಿಸುತ್ತಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ಸ್ಲಮ್ ಬೊರ್ಡಿನವರು ಯಾವುದೇ ಕಟ್ಟಡ ಕಟ್ಟುವ ಕೆಲಸ

ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ, ಆದರೆ ಆಕ್ಷೇಪಣೆ ಮಾಡಿದ್ದರಿಂದ ನಿಲ್ಲಿಸಿದ್ದರು. ಘಟನೆ ನಡೆದ ಸಮಯದಲ್ಲಿ ಸ್ಲಮ್ ಬೊರ್ಡ್ ಕೆಲಸ ಪ್ರಗತಿಯಲ್ಲಿ ಇರಲಿಲ್ಲ.

7. ನಾನು ಹೇಳಿದ ಬೋರವೆಲ್ ಡೆಡ್ ಬೋರ್ ವೆಲ್ ಎನ್ನುವುದು ಸರಿಯಲ್ಲ. ಸದರಿ ಬೋರವೆಲ್ ನಲ್ಲಿ ನೀರು ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ.

8. ಘಟನೆ ನಡೆದ ಸಮಯದಲ್ಲಿ ಜನರು ಒಟ್ಟಿಗೆ ಸೇರುವುದಕ್ಕೆ ಸರಕಾರ ನಿರ್ಭಂದ ಹೇರಿತು ಎಂದರೆ ನಾವು ಇಬ್ಬರೆ ಕುಳಿತ್ತಿದ್ದೆವು.

ಸೂಚನೆಃ ಕಟ್ಟೆಯ ಮೇಲೆ ಕುಳಿತು ಮಾತನಾಡುವುದಕ್ಕೆ ಸರಕಾರ ನಿರ್ಭಂದ ಹೇರಿತು.
ಉತ್ತರಃ ಗೊತ್ತಿಲ್ಲ.

9. ನಮ್ಮ ಮನೆಯ ಮುಂದೆ ಗೀತಾ ಗಂಡ ಚಂದ್ರಶೇಖರ ಇವರ ಮನೆ ಇದೆ ಎನ್ನುವುದು ನಿಜ. ಅವರ ಮನೆಯ ಉತ್ತರಕ್ಕೆ ಅವರ ಮೇನ್ ಡೋರ್ ಮತ್ತು ಗೇಟ್ ಇದೆ ಎನ್ನುವುದು ನಿಜ. ಗೀತಾ ಅವರ ಮನೆಯ ಹಿಂದಿನ ಭಾಗದಲ್ಲಿ ಶೀಲ್ಪಾ, ಪದ್ಮಾವತಿ, ರಾಚಮ್ಮ ಇವರ ಮನೆಗಳು ಇರುತ್ತವೆ ಎನ್ನುವುದು ನಿಜ. ಶೀಲ್ಪಾ ಇವರ ಮನೆಯಿಂದ ರಾಚಮ್ಮ ಇವರ ಮನೆಯವರೆಗೆ ಇವರುಗಳ ಮನೆಯ ಮುಂದೆ ಮಹಿಬೂಬ್, ರಫೀಕ್, ಅಖ್ತರ್ ಬೇಗಂ ಮತ್ತು ಮಾನಮ್ಮ ಮನೆಗಳು

ಇರುತ್ತವೆ ಎನ್ನುವುದು ನಿಜ. ಈ ಮನೆಗಳಲ್ಲಿ ಜನರು ವಾಸವಾಗಿದ್ದಾರೆ ಎನ್ನುವುದು ನಿಜ.

10. ಘಟನೆ ನಡೆದ ಸ್ಥಳದಲ್ಲಿ ಯಾವುದೇ ಘಟನೆ ನಡೆದರೆ ಮೇಲೆ ಹೇಳಿದ ಎಲ್ಲರ ಮನೆಗಳ ಮುಂದೆ ಕಾಣುತ್ತದೆ ಎನ್ನುವುದು ನಿಜ, ಆದರೆ ಅವರು ಮನೆಯಲ್ಲಿ ಇರಲಿಲ್ಲ.

11. ಆರೋಪಿಯ ಮನೆ ನಮ್ಮ ಮನೆಯ ಲೈನ್ ನಲ್ಲಿ ಬರುವುದಿಲ್ಲ ಎನ್ನುವುದು ನಿಜ. ನಮ್ಮ ಮನೆಯಿಂದ ಹಿಂದೆ ಎರಡು ಲೈನ್ ಆದ ನಂತರ ಆರೋಪಿಯ ಮನೆ ಇದೆ ಎನ್ನುವುದು ನಿಜ.

12. ಘಟನೆ ಎಷ್ಟುಹೊತ್ತು ನಡೆಯಿತು ಎಂದರೆ ಅವರು ಬಂದು ಹೊಡೆದರು, ಆಗ ನಾವು ಮಾತನಾಡುತ್ತಿದ್ದೆವು ಎಷ್ಟು ಹೊತ್ತು ಘಟನೆ ನಡೆಯಿತು ಎಂದು ಹೇಳಲಾಗುವುದಿಲ್ಲ. ಅವರು ಹೊಡೆದಾಗ ನಾನು ಕೆಳಗೆ ಬಿದ್ದೆ, ನಾನು ಮೂರ್ಚೆ ಹೋಗಿದ್ದೆನು. ನಾನು ಎಷ್ಟು ತಾಸು ಮೂರ್ಚೆ ಹೋಗಿದ್ದೆನು ಎಂದು ಹೇಳಲಾಗುವುದಿಲ್ಲ. ಆಸ್ಪತ್ರೆಯಲ್ಲಿ ಎಚ್ಚರವಾಯಿತು. ಆಸ್ಪತ್ರೆಗೆ ಯಾರು ಕರೆದಕೊಂಡು ಹೋದರು ಎಂದು ಹೇಳಲಾಗುವುದಿಲ್ಲ, ಆದರೆ ಓಣಿಯಲ್ಲಿರುವವರೂ ಕರೆದುಕೊಂಡು ಹೋದರು. ನನಗೆ ಜ್ಞಾನ ಬಂದಾಗ ಸಮಯ 09.30 ಆಗಿತ್ತು. ಘಟನೆಯಾದಾಗಿನಿಂದ 09.30 ವರೆಗೆ ನಾನು ಪ್ರಜ್ಞಾಹಿನ ಸ್ಥಿತಿಯಲ್ಲಿ ಇದ್ದೆನು ಎಂದು ಸೂಚಿಸುವುದು ನಿಜ. ನನಗೆ ಪ್ರಜ್ಞೆ ಬಂದಾಗ ನನ್ನ ಜೊತೆ ಓಣಿಯಲ್ಲಿಯ ಎಲ್ಲರೂ ಇದ್ದರು. ಎಲ್ಲರೂ ಎಂದರೆ ರಾಚಮ್ಮ, ಲಕ್ಷ್ಮಿ

ಪದ್ಮಾವತಿ, ಶೀಲ್ಪಾ, ಗೀತಾ, ಅಖ್ತರ್ ಬೇಗಂ, ಮಾನಮ್ಮ, ರಫೀಕ್, ಮಹೆಬೂಬ್ ಎಲ್ಲರೂ ಇದ್ದರೇ ಎಂದರೆ ಇದ್ದರು.

13. ಗುನ್ಹೆ ಸ್ಥಳದಿಂದ ಆಸ್ಪತ್ರೆಗೆ ಯಾವ ವಾಹನದಲ್ಲಿ ಕರೆದುಕೊಂಡು ಹೋದರು ಎಂದು ನನಗೆ ಯಾರೂ ಹೇಳಿಲ್ಲ. ನನಗೆ ಪ್ರಜ್ಞೆ ಬಂದ ನಂತರ ನಾನು ಘಟನೆ ಬಗ್ಗೆ ವೈದ್ಯರಿಗೆ ಹೇಳಿದ್ದೆನೆ. ಆಸ್ಪತ್ರೆಗೆ ಪೋಲಿಸರು ಬಂದಾಗ 10.00 ಗಂಟೆ ಆಗಿತ್ತು, ಸಾಕ್ಷಿ ಮತ್ತೆ ಹೇಳುತ್ತಾರೆ 09.45 ಕ್ಕೆ ಬಂದಿದ್ದಾರೆ, ಸಾಕ್ಷಿ ಮತ್ತೆ ಹೇಳುತ್ತಾರೆ 09.45 ಕ್ಕೆ ಅಥವಾ 10.00 ಕ್ಕೆ ಬಂದಿದ್ದಾರೆ ನಾನು ಟೈಮ್ ನೋಡಿಲ್ಲ. ಅಲ್ಲಿ ಬಂದಿದ್ದ ಪೋಲಿಸರ ಹೆಸರು ಗೊತ್ತಿಲ್ಲ.

ಪ್ರಶ್ನೆಃ ಪಿರ್ಯಾದಿಯನ್ನು ಪೋಲಿಸರೇ ಬರೆದುಕೊಂಡರೇ?
ಉತ್ತರಃ ಬರೆದುಕೊಂಡರು.

ಪ್ರಶ್ನೆಃ ಯಾರು ಪೋಲಿಸರು ಬರೆದುಕೊಂಡರು, ಎಷ್ಟು ಮಂದಿ ಬಂದಿದ್ದರು, ಪಿ.ಎಸ್.ಐ ಬಂದಿದ್ದರೇ?
ಉತ್ತರಃ ಗೊತ್ತಿಲ್ಲ, ಇಬ್ಬರು ಬಂದಿದ್ದರು.

ಪ್ರಶ್ನೆಃ ಪೋಲಿಸರು ಬರೆದುಕೊಂಡ ಪಿರ್ಯಾದಿಗೆ ನೀವು ಸಹಿ ಮಾಡಿದ್ದಿರಾ?
ಉತ್ತರಃ ಹೌದು.

ಪ್ರಶ್ನೆಃ ಪಿರ್ಯಾದಿಯನ್ನು ಯಾರು ಹೇಳಿ ಬರೆಸಿದರು?
ಉತ್ತರಃ ಪಿರ್ಯಾದಿಯನ್ನು ನನ್ನ ಗಂಡ ಹೇಳಿ ಬರೆಸಿದ್ದಾರೆ.

ಪ್ರಶ್ನೆಃ ನಿನ್ನ ಗಂಡ ಪಿರ್ಯಾದಿಗೆ ಸಹಿ ಮಾಡಿದ್ದಾನೇಯೇ?
ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ ಈ ಘಟನೆ ನಡೆದಾಗ ಎಷ್ಟು ಜನ ಸೇರಿದ್ದರು.
ಉತ್ತರಃ ಸುಮಾರು ಜನ ಸೇರಿದ್ದರು.

ಸೂಚನೆಃ 50-60 ಜನ ಸೇರಿದ್ದರೇ.
ಉತ್ತರಃ ಸೇರಿದ್ದರು.

ಸೂಚನೆಃ ಸುತ್ತಮುತ್ತಲಿನ ಎಲ್ಲ ಮನೆಯವರೂ ಸೇರಿದ್ದರೇ.
ಉತ್ತರಃ ಸೇರಿದ್ದರು.

ಪ್ರಶ್ನೆಃ 50-60 ಜನ ಸೇರಿದ್ದರು, ಸುತ್ತಮುತ್ತಲಿನ ಮನೆಯವರೂ ಸೇರಿದ್ದರು ಎಂದು ಪೋಲಿಸರಿಗೆ ತಿಳಿಸಿದ್ದಿರಾ?
ಉತ್ತರಃ ತಿಳಿಸಿದ್ದೆ.

ಸೂಚನೆಃ ಅವರ ಹೆಸರುಗಳನ್ನು ನೀವು ಹೇಳಿ ಬರೆಸಿದೀರಿ.
ಉತ್ತರಃ ಹೌದು.

ಪ್ರಶ್ನೆಃ ಆರೋಪಿತರು ಹೊಡೆಯುತ್ತಿದ್ದಾಗ, ಜಾತಿ ನಿಂದನೆ ಮಾಡುತ್ತಿದಾಗ ಯಾರಾದರೂ ಬಂದು ಬಿಡಿಸಿಕೊಂಡರೇ?
ಉತ್ತರಃ ಬಿಡಿಸಿಕೊಂಡರು.

ಪ್ರಶ್ನೆಃ ಯಾರು ಬಿಡಿಸಿಕೊಂಡರು?
ಉತ್ತರಃ ಎಲ್ಲ ಓಣಿಯಲ್ಲಿಯವರೂ ಬಿಡಿಸಿದರು.

ಸೂಚನೆಃ ಹೆಸರು ಹೇಳಲು ಆಗುವುದಿಲ್ಲ.
ಉತ್ತರಃ ನಾನು ಕೆಳಗೆ ಬಿದ್ದಿದ್ದೆ ಆದ್ದರಿಂದ ಹೆಸರು ಹೇಳಲಾಗುವುದಿಲ್ಲ.

ಸೂಚನೆಃ ಯಾರು ಬೈದರು, ಯಾರು ಹೊಡೆದರು ಎಂದು ಪಿರ್ಯಾದಿಯಲ್ಲ ಹೇಳಿಲ್ಲ.
ಉತ್ತರಃ ಅವರೇ ಬೈದಿದ್ದಾರೆ, ಅವರೇ ಹೊಡೆದಿದ್ದಾರೆ, ಅವರಿಬ್ಬರೇ ಬೈದಿದ್ದಾರೆ ಮತ್ತು ಅವರಿಬ್ಬರೇ ಹೊಡೆದಿದ್ದಾರೆ, ತಾಯಿ ಮಗಳು ಸೇರಿ ಹೊಡೆದಿದ್ದಾರೆ, ಮಾದರ ಸೂಳೇ ಎಂದು ಬೈದು ಹೊಡೆದಿದ್ದಾರೆ.

ಪ್ರಶ್ನೆಃ ಸರಕಾರದಿಂದ ನಿನಗೆ ಈ ಕೇಸಿನಲ್ಲಿ ನಿನಗೆ ಎಷ್ಟು ರೊಕ್ಕ ಬಂದಿದೆ?
ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ ನಿನ್ನ ಅಕೌಂಟಿಗೆ ರೊಕ್ಕ ಬಿದ್ದಿದ್ದೆಯೋ, ಇಲ್ಲವೋ ?
ಉತ್ತರಃ ಗೊತ್ತಿಲ್ಲ.

ಸೂಚನೆಃ ಈ ಕೇಸಿಗೆ ಸಂಬಂಧಿಸಿದಂತೆ ನಿನ್ನ ಅಕೌಂಟಿಗೆ ದುಡ್ಡು ಬಿದ್ದಿರುತ್ತವೆ.
ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ ನೀನು ಎಷ್ಟನೇ ತರಗತಿವರೆಗೆ ಓದಿರುತ್ತೀ?
ಉತ್ತರಃ ದ್ವಿತೀಯ ಪಿ.ಯು.ಸಿ.ವರೆಗೆ.

ಸೂಚನೆಃ ಈಗ ಓದಿ ಹೇಳಿದ ನಿಮ್ಮ ಮುಖ್ಯವಿಚಾರಣೆ ಮೊದಲನೇ ಪ್ಯಾರದ 4 ರಿಂದ 8 ನೇ ಸಾಲಿನಲ್ಲಿ ಬರೆದ ವಿಷಯವನ್ನು ನೀವು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದಿರಿ ಮತ್ತು ಪೋಲಿಸರ ಮುಂದೆ ಹೇಳಿಲ್ಲ.
ಉತ್ತರಃ ಸುಳ್ಳು.

ಸೂಚನೆಃ ಈಗ ಓದಿ ಹೇಳಿದ ನಿಮ್ಮ ಮುಖ್ಯವಿಚಾರಣೆ ಎರಡನೇ ಪ್ಯಾರದ 1 ರಿಂದ 3 ನೇ ಸಾಲಿನಲ್ಲಿ ಬರೆದ ವಿಷಯವನ್ನು ನೀವು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದಿರಿ ಮತ್ತು ಪೋಲಿಸರ ಮುಂದೆ ಹೇಳಿಲ್ಲ.
ಉತ್ತರಃ ಸುಳ್ಳು.

ಸೂಚನೆಃ ಅದೇ ರೀತಿ ಹೊಟ್ಟೆಗೆ ಕಾಲಿನಿಂದ ಒದ್ದಿದ್ದಾರೆ ಎಂದು ದೂರಿನಲ್ಲಿ ನೀವು ಹೇಳಿಲ್ಲ.
ಉತ್ತರಃ ಸುಳ್ಳು.

ಸೂಚನೆಃ ಚಾಸಾ-2 ಬಿಡಿಸಲು ಬಂದರು ಎಂದು ದೂರಿನಲ್ಲಿ ನೀವು ಹೇಳಿಲ್ಲ.

ಉತ್ತರಃ ಸುಳ್ಳು.

ಪ್ರಶ್ನೆಃ ಪೋಲಿಸ್ ಠಾಣೆಗೆ ಯಾವಾಗ ಹೋಗಿದ್ದಿರಿ?

ಉತ್ತರಃ ರಾತ್ರಿ 10.00 ಗಂಟೆಗೆ ಸ್ವಲ್ಪ ಆರಾಮ ಆದ ಮೇಲೆ ಹೋಗಿದ್ದೆ.

ಪ್ರಶ್ನೆಃ ಯಾರ್ಯಾರು ಹೋಗಿದ್ದಿರಿ?

ಉತ್ತರಃ ಓಣಿಯ ಎಲ್ಲ ಜನರು.

ಪ್ರಶ್ನೆಃ ನೀವು ಪೋಲಿಸ್ ಠಾಣೆಗೆ ಹೋದಾಗ ಯಾರು ಇದ್ದರು ?

ಉತ್ತರಃ ಪೋಲಿಸರು, ಪಿ.ಎಸ್.ಐ ಇದ್ದರು.

ಪ್ರಶ್ನೆಃ ಪೋಲಿಸ್ ಠಾಣೆಯಲ್ಲಿ ಎಷ್ಟು ಹೊತ್ತು ಇದ್ದಿರಿ ?

ಉತ್ತರಃ 10 ನಿಮಿಷ ಕುತಿಳಿದ್ದೆವು ನಂತರ ಕೇಸ್ ಕೊಟ್ಟು ಬಂದೆವು.

ಪ್ರಶ್ನೆಃ ಆ ದಿನ ನಿಮ್ಮ ಜೊತೆ ಡಿ.ಎಸ್.ಎಸ್. ಮುಖಂಡರು ಎಲ್ಲರೂ ಬಂದಿದ್ದರೇ?

ಉತ್ತರಃ  ಬಂದಿದ್ದರು.

ಸೂಚನೆಃ ಅವರೆಲ್ಲ ಬಂದ ಮೇಲೆಯೇ ಕೇಸ್ ರಜಿಸ್ಟ್ರ್ ಆಗಿದೆ.

ಉತ್ತರಃ ಕೇಸ್ ರಿಜಿಸ್ಟರ್ ಆದ ಮೇಲೆ ಅವರೆಲ್ಲರು ಬಂದರು.

ಸೂಚನೆಃ ಅವರ ಒತ್ತಡದ ಮೇಲೆ ಸುಳ್ಳು ಕೇಸ್ ರಜಿಸ್ಟರ್ ಆಗಿದೆ.
ಉತ್ತರಃ ಸುಳ್ಳು.

ಸೂಚನೆಃ ಆಸ್ಪತ್ರೆಗೆ ಹೋದ ಮೇಲೆ ಪಿರ್ಯಾದಿ ಕೊಡುವ ಮೊದಲು ಡಿ.ಎಸ್.ಎಸ್ ಮುಖಂಡರನ್ನು ಹಿಡಿದು ಒತ್ತಡ ಹಾಕಿ ಸುಳ್ಳು ಕೇಸ್ ಹಾಕಿದ್ದೀರಿ.
ಉತ್ತರಃ ಸುಳ್ಳು.

ಸೂಚನೆಃ ನೀವು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಯಾವುದೇ ಗಾಯ ಆಗಿಲ್ಲ, ಸುಳ್ಳು ಕೇಸ್ ಮಾಡಬೇಕು ಎಂದು ನಿಮ್ಮ ಸಂಘಟನೆಯವರನ್ನು ಹಿಡಿದುಕೊಂಡು ಸುಳ್ಳು ಕೇಸ್ ಮಾಡಿದ್ದೀರಿ.
ಉತ್ತರಃ ಸುಳ್ಳು.

ಪ್ರಶ್ನೆಃ ಪೋಲಿಸರು ಘಟನೆ ಸ್ಥಳಕ್ಕೆ ಬಂದಿದ್ದರು ಎಂದು ಹೇಳಿದ್ದಿರಿ, ಯಾವ ತಾರೀಕು, ಎಷ್ಟು ಗಂಟೆಗೆ ಬಂದಿದ್ದರು ?
ಉತ್ತರಃ ನನಗೆ ತಾರೀಕು ನೆನಪಿಲ್ಲ, ಸಂಜೆ ಸಮಯದಲ್ಲಿ ಬಂದಿದ್ದರು.

ಪ್ರಶ್ನೆಃ ಘಟನೆಯಾದ ಎಷ್ಟು ದಿನಕ್ಕೆ ಪೋಲಿಸರು ಬಂದಿದ್ದರು ?
ಉತ್ತರಃ 2-3 ದಿನಕ್ಕೆ ಬಂದಿದ್ದರು.

ಪ್ರಶ್ನೆಃ ಪೋಲಿಸರು ಬಂದಾಗ ಸಮಯ ಎಷ್ಟು ಆಗಿತು?
ಉತ್ತರಃ ನಾನು ಸಮಯ ನೋಡಿಲ್ಲ, 03 ಅಥವಾ 04 ಗಂಟೆ ಆಗಿದ್ದಿರಬಹುದು.

ಪ್ರಶ್ನೆಃ ಪೋಲಿಸರು ಬಂದಾಗ ಯಾರ್ಯಾರು ಸ್ಥಳದಲ್ಲಿ ಇದ್ದರು?
ಉತ್ತರಃ ಎಲ್ಲರೂ ಇದ್ದರು.

ಪ್ರಶ್ನೆಃ ಸಮಾಜದ ಮುಖಂಡರು ಎಲ್ಲರೂ ಇದ್ದರೇ, ಡಿಎಸ್.ಎಸ್ ಮುಖಂಡರು ಇದ್ದರೇ?
ಉತ್ತರಃ ಇಲ್ಲ, ನಮ್ಮ ಓಣಿಯುವರು ಎಲ್ಲರೂ ಇದ್ದರು.

ಪ್ರಶ್ನೆಃ ಪೋಲಿಸರ ಜೊತೆಗೆ ಬೇರೆ ಯಾರ್ಯಾರು ಬಂದಿದ್ದರು?
ಉತ್ತರಃ ಪೋಲಿಸರ ಜೊತೆ ಬೇರೆಯವರು ಬಂದಿದ್ದರು, ಪೋಲಿಸರು ಇಬ್ಬರು ಅಥವಾ ಮೂವರು ಇದ್ದರು.

ಪ್ರಶ್ನೆಃ ಆ ದಿವಸ ಪೋಲಿಸರು ನಿಮ್ಮ ಸಹಿ ಪಡೆದಿದ್ದಾರೆಯೇ?
ಉತ್ತರಃ ಹೌದು.

ಪ್ರಶ್ನೆಃ ಪ್ಲೇನ್ ಪೇಪರ್ ಮೇಲೆ ನಿಮ್ಮ ಸಹಿ ಪಡೆದ್ದರೇ?
ಉತ್ತರಃ ಪಡೆದರು.

ಪ್ರಶ್ನೆಃ ಯಾವುದಕ್ಕೆ ಸಹಿ ಪಡೆದರು ಎಂದು ಪೋಲಿಸರು ಹೇಳಿದರೇ?
ಉತ್ತರಃ ಪೋಲಿಸರು ನಮ್ಮನ್ನು ಕೇಳಿ ವಿಚಾರ ಮಾಡಿ ಹೊಡೆದಿದ್ದರ ಸಲುವಾಗಿ ನನ್ನ ಸಹಿ ಪಡೆದಿದ್ದಾರೆ.

ಪ್ರಶ್ನೆಃ ಡಿ.ಎಸ್.ಪಿ ಸಾಹೇಬರ್ ಎಷ್ಟು ಸಮಯದವರೆಗೆ ಇದ್ದರು?
ಉತ್ತರಃ ನಾನು ಸಮಯ ನೋಡಿಲ್ಲ.

ಪ್ರಶ್ನೆಃ ಎಷ್ಟು ತಾಸು ಇದ್ದರು?
ಉತ್ತರಃ ಒಂದು ಅಥವಾ ಎರಡು ತಾಸು ಇದ್ದರು.

ಪ್ರಶ್ನೆಃ ಶೀಲ್ವಾ ಅವರ ಮನೆ ನಂಬರ್ ಎಷ್ಟು?
ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ ಆ ದಿವಸ ಪೋಲಿಸರು ಎಷ್ಟು ಸಹಿಗಳನ್ನು ಪಡೆದರು?
ಉತ್ತರಃ ಎರಡು ಸಹಿಗಳನ್ನು ಪಡೆದರು.

ಪ್ರಶ್ನೆಃ ಬಿಳಿ ಹಾಳೆಗಳ ಮೇಲೆ ಸಹಿ ಪಡೆದರೆಯೇ?
ಉತ್ತರಃ ಬಿಳಿ ಹಾಳೆಗಳ ಮೇಲೆ ಸಹಿ ಮಾಡಿಲ್ಲ, ಮ್ಯಾಟರ್ ಬರೆದ ಮೇಲೆ ಸಹಿ ಪಡೆದಿದ್ದಾರೆ.

ಪ್ರಶ್ನೆಃ ಆ ಮ್ಯಾಟರ್ ಯಾರು ಬರೆದರು ?
ಉತ್ತರಃ ಮ್ಯಾಟರ್ ನಾನು ಹೇಳಿದಂತೆ ಪೋಲಿಸರು ಬರೆದಿದ್ದಾರೆ ಅವರ ಹೆಸರು ಗೊತ್ತಿಲ್ಲ.

ಪ್ರಶ್ನೆಃ ಆ ಮ್ಯಾಟರನ್ ಯಾರು ಹೇಳಿ ಬರೆಸಿದರು?
ಉತ್ತರಃ ಓಣಿಯಲ್ಲಿ ಎಲ್ಲರೂ ಸೇರಿ ಬರೆಯಿಸಿದ್ದಾರೆ.

ಪ್ರಶ್ನೆಃ ಅವರ ಹೆಸರು ಹೇಳಲು ಆಗುತ್ತದೆಯೇ?
ಉತ್ತರಃ ಓಣಿಯ ಎಲ್ಲರೂ ಹೇಳಿದ್ದಾರೆ.

ಸೂಚನೆಃ ಅವರ ಹೆಸರುಗಳನ್ನು ಹೇಳಿ.
ಉತ್ತರಃ ಹಸಿರುದ್ದೀನ್, ಬಾಬು, ಪ್ರಭು, ಮಹೆಬೂಬಿ ಇವರೆಲ್ಲರೂ ಹೇಳಿ ಬರೆಸಿದ್ದಾರೆ.

ಪ್ರಶ್ನೆಃ ಇವರು ನಾಲ್ಕು ಜನರು ಮಾತ್ರ ಹೇಳಿ ಬರೆಸಿದರೇ?
ಉತ್ತರಃ ಶೀಲ್ವಾ, ಗೀತಾ, ರಾಚಮ್ಮ, ಲಕ್ಷ್ಮಿ, ಪದ್ಮ ಇವರೂ ಸಹ ಹೇಳಿ ಬರೆಸಿದ್ದಾರೆ.

ಸೂಚನೆಃ ನಿರ್ಮಾಲ ಇವರಿಗೆ ಮತ್ತು ನಿಮಗೆ ಸರಿ ಇಲ್ಲ.
ಉತ್ತರಃ ಸರಿ ಇದೆ, ಅವರು ನಾವು ಜಗಳ ಮಾಡಿಲ್ಲ.

ಸೂಚನೆಃ ಯಾಕೆಂದರೆ ಅವರು ನಮ್ಮ ವಿರುದ್ದ ಒತ್ತುವರಿ ಮಾಡಿ ತಡೆಹೊಡಿದ್ದರು ಆದ್ದರಿಂದ ಅವರಿಗೂ ನಿಮಗೂ ಸರಿ ಇಲ್ಲ.
ಉತ್ತರಃ ಸರಿ ಇದೆ, ಅವರು ನಾವು ಚೆನ್ನಾಗಿ ಇದ್ದೆವೆ. ಅವರ ಮಗಳ ಡೆಲಿವರಿ ಆದಾಗ ನಮ್ಮ ಮನೆಯ ಹೊರ್ಸ್ (ಮಂಚ) ಕೊಟ್ಟಿದ್ದೆನೆ.

ಸೂಚನೆಃ ಕೋವಿಡ-19 ಬಹಳ ಪ್ರಖರತೆಯಲ್ಲಿ ಇತ್ತು , ನೀವು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ.
ಉತ್ತರಃ ಸುಳ್ಳು.

ಸೂಚನೆಃ ಸರಕಾರದ ಸೂಚನೆ ಪ್ರಕಾರ ಯಾರು ಹೊರಗಡೆ ಕೂಡುವುದು, ಗುಂಪು ಕಟ್ಟುವುದು ಮಾಡಲು ನಿರ್ಭಂದ ಇತ್ತು.
ಉತ್ತರಃ ನಾವು ಇಬ್ಬರೇ ಕುಳಿತ್ತಿದ್ದೆವು.
ಸೂಚನೆಃ ನಿಮ್ಮ ಮುಖ್ಯವಿಚಾರಣೆಯ ಪ್ಯಾರ 2 ಮತ್ತು 3 ರಲ್ಲಿ ಹೇಳಿದ ಎಲ್ಲ ವಿಷಯಗಳು ಸುಳ್ಳು ಇರುತ್ತವೆ.
ಉತ್ತರಃ ಸುಳ್ಳು.

ಸೂಚನೆಃ ನೀವು ಅವರ ಮೇಲೆ ದ್ವೇಷ ಇಟ್ಟುಕೊಂಡಿದ್ದಕ್ಕೆ ಅವರಿಗೂ ಮನೆ ಕಟ್ಟಲು ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿದ್ದೀರಿ.
ಉತ್ತರಃ ಅವರು ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿದ್ದರಿಂದ ದೂರು ಕೊಟ್ಟಿದ್ದೆನೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಸಿ/ಸಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.